# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ

ಕೆ.ಆರ್. ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ:ಸಶಿಕ/ಕಜಿಬಿವಿ/ಇತರೆ/2022-23 ದಿನಾಂಕ: 12-05-2023

## ಜ್ಞಾಪನ

ವಿಷಯ: ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ ಔಷಧಿ ಪರಿಯೋಜನಾ (PMBJP) ಅಡಿಯಲ್ಲಿನ "SUVIDHA SARATHI" ಯೋಜನೆಯ ಅನುಷ್ಠಾನ ಸಂಬಂಧ ನೋಡಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಪಿ 16 ಇಜಿಓವಿ 2023 ದಿನಾಂಕ 04-02-2023.

2. ಕಾರ್ಯದರ್ಶಿಗಳು, ಕೇಂದ್ರ ಸರ್ಕಾರದ ರಸಾಯನಿಕ ಮತ್ತು ರಸಗೊಬ್ಬರ ಹಾಗೂ ಜನ ಔಷಧಿಯ ವಸ್ತುಗಳ ಸಚಿವಾಲಯ ಇಲಾಖೆ ರವರ ಪತ್ರ ಅ.ಸ. ಪತ್ರ ಸಂಖ್ಯೆ:D.O.No 35030/55/2022-Scheme ದಿನಾಂಕ:12-01-2023.

****

ಭಾರತ ಸರ್ಕಾರವು ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಶೈಕ್ಷಣಿಕ ಸಾಧನೆ, ಆರೋಗ್ಯ, ಮತ್ತು ಯೋಗಕ್ಷೇಮಕ್ಕಾಗಿ ಮುಟ್ಟಿನ ನೈರ್ಮಲ್ಯದ ಮಹತ್ವವನ್ನು ಗುರುತಿಸಿ, ಮುಟ್ಟಿನ ನೈರ್ಮಲ್ಯದ ಬಗ್ಗೆ ಅರಿವು, ನಿರ್ವಹಣೆ, ಮುಟ್ಟಿನ ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ ಸುಧಾರಣೆ ತರಲು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ,

ಕೇಂದ್ರ ಸರ್ಕಾರದ ಔಷಧಿಯ ಇಲಾಖೆಯು **ದೇಶಾದ್ಯಂತ 8900** ಪ್ರಧಾನ ಮಂತ್ರಿ ಜನ ಔಷಧಿ ಪರಿಯೋಜನಾ **(PMBJP)** ಕೇಂದ್ರಗಳ ಮೂಲಕ ನಾಗರೀಕರಿಗೆ ಕೈಗೆಟಕುವ ದರದಲ್ಲಿ ಗುಣಾತ್ಮಕ ಜನ ಔಷಧಿಗಳನ್ನು ಒದಗಿಸಲಾಗುತ್ತಿದೆ. ಸದರಿ ಕೇಂದ್ರಗಳಲ್ಲಿ ಪರಿಸರ ಸ್ನೇಹಿ ಅಗ್ಗದ ದರದ ಜನ ಔಷಧಿ ಸುವಿಧಾ ಸ್ಯಾನಿಟರಿ ಪ್ಯಾಡಗಳನ್ನು ಕೂಡ ಸೇರಿಸಲಾಗಿದೆ.

ಮುಂದುವರೆದು, ಸದರಿ ಇಲಾಖೆಯು ಶಾಲೆಗಳಲ್ಲಿ ಹದಿಹರೆಯದ ಹೆಣ್ಣು ಮಕ್ಕಳಿಗೆ ಮುಟ್ಟಿನ ನೈರ್ಮಲ್ಯ ದ ಬಗ್ಗೆ ಅರಿವು ಮೂಡಿಸಲು **ಸುವಿಧಾ ಸಾರಥಿ** ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯ ಉದ್ದೇಶ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ 8 ನೇ ತರಗತಿಯಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ **ಸುವಿದಾ ನ್ಯಾಪ್ ಕಿನ್** ಗಳನ್ನು ಉಚಿತವಾಗಿ ವಿತರಿಸುವುದಾಗಿದೆ,

ಸದರಿ ಯೋಜನೆಯನ್ನು **Pharmaceutical and Medical Devices Bureau of India (PMBI).** ಅನೇಕ ಭಾಗಿದಾರರ ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತದೆ. **ಉದಾ:** PMBJP ಕೇಂದ್ರಗಳು, ಸಾರ್ವಜನಿಕ ವ್ಯಕ್ತಿಗಳು, ಸರ್ಕಾರಿ ಇಲಾಖೆಗಳು, ಬ್ಯಾಂಕ್ ಗಳು, ಸ್ವಾಯತ್ತ ಮತ್ತು ಖಾಸಗಿ ಸಂಸ್ಥೆಗಳು, ಸಾರ್ವಜನಿಕ ವಲಯಗಳ ಉದ್ದಿಮಗಳು, ಶಾಲೆಗಳು ಇತ್ಯಾದಿ, ಈ ಎಲ್ಲಾ ಭಾಗೀದಾರರು ಇಲಾಖೆ ಸಿದ್ದಪಡಿಸಿದ ಮೊಬೈಲ್ ಆಪ್ ಹಾಗೂ IT ಪೋರ್ಟಲ್ ನಲ್ಲಿ ನೆರವು ನೀಡುವ, ಸ್ವೀಕರಿಸುವ ಶಾಲೆಗಳಾಗಿ ನೊಂದಾಯಿಸಬಹುದು ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್ ಗಳ ಪೂರೈಕೆಗಾಗಿ ತಾವು ಇಚ್ಚಿಸಿದ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಆರ್ಥಿಕ ಸಹಾಯವನ್ನು ಪೋರ್ಟಲ್ ಮೂಲಕ ಮಾಡಬಹುದಾಗಿದೆ.

"ಸುವಿಧ ಸಾರಥಿ" ಯೋಜನೆಯಡಿ ಪೂರೈಕೆಯಾಗುವ ಸ್ಯಾನಿಟರಿ ಪ್ಯಾಡ್ ಗಳನ್ನು ಜಾಲತಾಣದಲ್ಲಿ ನೊಂದಾಯಿಸಿಕೊಂಡಿರುವ ಸರ್ಕಾರಿ ಶಾಲೆಗಳಲ್ಲಿ 8 ರಿಂದ 12ನೇ ತರಗತಿಯಲ್ಲಿ ಓದುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಉಚಿತವಾಗಿ ಶಾಲೆಗಳಿಗೆ ವಿತರಿಸಲಾಗುತ್ತದೆ. PMBI ರವರು ಜನ ಔಷಧಿ ಕೇಂದ್ರಗಳ ಮೂಲಕ ನೊಂದಾಯಿಸಿಕೊಂಡಿರುವ ಶಾಲೆಗಳಿಗೆ ಸರಬರಾಜು ಮಾಡುವುದನ್ನು ಖಚಿತಪಡಿಸುತ್ತಾರೆ.

ಸದರಿ ಉಪಕ್ರಮವನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ ಪರಿಣಾಮಕಾರಿಯಾಗಿ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಹಂತದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐಡಿಯನ್ನು ಕೂಡಲೇ ರಾಜ್ಯ ಕಛೇರಿಗೆ ನೀಡಲು ತಿಳಿಸಿದೆ. ಎಲ್ಲಾ ಶಾಲೆಗಳ ಹೆಣ್ಣು ಮಕ್ಕಳ ದಾಖಲಾತಿ ಸಂಖ್ಯೆಯನ್ನು ಸದರಿ **(https://suvidhasarathi.pmbi.co.in)** ಜಾಲ ತಾಣದಲ್ಲಿ ಕಡ್ಡಾಯವಾಗಿ ನೊಂದಾಯಿಸಿ ಈ ಯೋಜನೆಯ ಅನುಕೂಲವನ್ನು ಪಡೆಯಲು ಉಪನಿರ್ದೇಶಕರು (ಆ) ರವರು ಕ್ರಮವಹಿಸುವಂತೆ ಸೂಚಿಸಿದೆ.

20.10.2020

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರುಗಳಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕನಾರ್ಟಕ ರವರುಗಳಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಶಾಲಾ ಶಿಕ್ಷಣ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರುಗಳಿಗೆ.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ, ಕಟ್ಟಡ, ರವರ ಆಪ್ತ ಶಾಖೆಗೆ.